# ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

## C.C. 21/2012

PW-1

| | | |
|---|---|---|
| ಹೆಸರು | :- | ಎಸ್ ಟಿ ಶ್ರೀನಿವಾಸ |
| ತಂದೆಯ ಹೆಸರು | :- | ತಿಮ್ಮರಾಯಪ್ಪ |
| ವಯಸ್ಸು | :- | 58 ವರ್ಷ |
| ವೃತ್ತಿ | :- | ಎ ಎಸ್ ಐ |
| ವಾಸ ಸ್ಥಳ | :- | ಬಿಡದಿ |
| ದಿನಾಂಕ | :- | 13.02.2020 |

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ದಂಡ ಪ್ರಕ್ರಿಯೆ ಸಂಹಿತೆ 299 ರಡಿ ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

1. ನಾನು 15.06.2016 ರಿಂದ ಇಲ್ಲಿಯವರೆಗೆ ಬಿಡದಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿನಾಂಕ 17.12.2018 ರಂದು ನ್ಯಾಯಾಲಯದ ಆದೇಶದಂತೆ 2 ನೇ ಆರೋಪಿ ಲಲಿತ್ ಅಲಿಯಾಸ್ ಲಲಿತ್ ಕುಮಾರ್ ರವರ ವಿರುದ್ದ ಪ್ರೊಕ್ಲಮೇಶನ್ ಆದೇಶವನ್ನು ಜಾರಿಗೊಳಿಸಿ ಅವರು ವಾಸಿಸುತ್ತಿದ್ದ ವಿಳಾಸಕ್ಕೆ ಹೋಗಿ ಅಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಆರೋಪಿ ಬಗ್ಗೆ ಸ್ಥಳೀಯರನ್ನು ವಿಚಾರಿಸಿದಾಗ ಅವರ ಬಗ್ಗೆ ಮಾಹಿತಿ ದೊರೆತಿರುವುದಿಲ್ಲ.

3. ಸಾಕ್ಷಿ ಗುರುತಿಸಿದ ಪಂಚನಾಮೆಗಳನ್ನು ನಿಪಿ-1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಜನಗಳು ಸೇರುವ ಜಾಗದಲ್ಲಿ ಅಂದರೆ ರಾಜರಾಜೇಶ್ವರಿ ದೇವಸ್ಥಾನದ ಬಳಿ ಪ್ರೊಕ್ಲಮೇಶನ್ ಪ್ರತಿಯನ್ನು ಚಿಟಕಾಯಿಸಿರುತ್ತೇನೆ. ಅಲ್ಲದೆ ಟಾಂಟಾಂ ಕೂಡ ಮಾಡಿಸಿರುತ್ತೇವೆ. ಆದರೂ ಆರೋಪಿ ಪತ್ತೆಯಾಗಿರುವುದಿಲ್ಲ.

4. ಆರೋಪಿ ಸಿಕ್ಕಿದಲ್ಲಿ ನನಗೆ ಮಾಹಿತಿ ನೀಡುವಂತೆ ಸ್ಥಳೀಯರಿಗೆ ತಿಳಿಸಿರುತ್ತೇನೆ. ಆರೋಪಿಗಳಿಗೆ ಯಾವುದೇ ಚರ ಸ್ಥಿರ ಆಸ್ತಿ ಇರುವುದಿಲ್ಲ ಎಂಬ ಬಗ್ಗೆ ಬೃಹತ್ ಬೆಂಗಳೂರು ಮಹನಗರ ಪಾಲಿಕೆಯಿಂದ ಮಾಹಿತಿ ನೀಡಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆ ನಿಪಿ-2 ಎಂದು ಗುರುತಿಸಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು